# ಮೊದಲ ನುಡಿಸಿರಿ

ಸಾಹಿತ್ಯಿಕ, ಬೌದ್ಧಿಕ, ಸಾಂಸ್ಕೃತಿಕ, ವೈಚಾರಿಕ ಹೀಗೆ ವಿವಿಧ ನೆಲೆಗಟ್ಟುಗಳಲ್ಲಿ ನಡೆಯುವ ನುಡಿಸಿರಿ ಒಂದು ಗುಣಾತ್ಮಕ ರೂಪ ಪಡೆದುಕೊಂಡಿದ್ದು ೨೦೧೪ರಲ್ಲಿ. ೨೦೧೪ರ ಡಿಸೆಂಬರ್ ೧೭,೧೮ ಮತ್ತು ೧೯ರಂದು ಮೊತ್ತ ಮೊದಲ ನುಡಿಸಿರಿ ಆರಂಭಗೊಂಡಿತು. ಮೊದಲ ನುಡಿಸಿರಿಯನ್ನು ಕನ್ನಡದ ಪ್ರಸಿದ್ಧ ಬರಹಗಾರ, ಸಂಸ್ಕೃತಿ ಚಿಂತಕ ಪ್ರೊ.ಬರಗೂರು ರಾಮಚಂದ್ರಪ್ಪನವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಆಗ ನುಡಿಸಿರಿಯ ಕೇಂದ್ರ ಚರ್ಚೆ ಕನ್ನಡ ಮನಸ್ಸು: ಸಾಹಿತ್ಯಿಕ ಸಾಂಸ್ಕೃತಿಕ ಸವಾಲುಗಳು ಎಂಬುದಾಗಿತ್ತು.

ಆಗ ಚಂದ್ರಶೇಖರ ಪಾಟೀಲ, ಹಂ.ಪಾ.ನಾಗರಾಜಯ್ಯ, ಸಿ.ವೀರಣ್ಣ, ಕಿ.ರಂ. ನಾಗರಾಜ, ರಾಜೇಂದ್ರ ಚೆನ್ನಿ, ಶಿವರಾಮ್ ಪಡಿಕ್ಕಲ್, ತಾಳ್ತಜೆ ವಸಂತಕುಮಾರ್, ಪ್ರಸನ್ನ, ನಾಗತಿಹಳ್ಳಿ ಚಂದ್ರಶೇಖರ್, ಪ್ರಭಾಕರ್ ಜೋ ಶಿ ಮೊದಲಾದ ವಿದ್ವಾಂಸರು ಕವಿಗೋಷ್ಠಿಯಲ್ಲಿ ಭಾಗವಹಿಸಿದ್ದರು.

ವೈದೇಹಿ, ದೊಡ್ಡರಂಗೇಗೌಡ, ಬಿ.ಆರ್.ಲಕ್ಷ್ಮಣರಾವ್, ಸುಬ್ರಾಯ ಚೊಕ್ಕಾಡಿ, ಎಂ.ಆರ್.ಕಮಲ, ಪ್ರಹ್ಲಾದ ಅಗಸನಕಟ್ಟೆ, ಡುಂಡಿರಾಜ್, ಯು.ಮಹೇಶ್ವರಿ ಮೊದಲಾದ ಕವಿಗಳು ಕವಿಸಮಯ-ಕವಿನಮನ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ಸಮಾರೋಪ ಸಮಾರಂಭದಲ್ಲಿ ಶ್ರೀನಿವಾಸ ಹಾವನೂರ, ಅಮೃತ ಸೋಮೇಶ್ವರ, ಚನ್ನಬಸವಣ್ಣ, ಹರಿಕೃಷ್ಣ ಪುನರೂರು ಮತ್ತು ಬಿ.ಜಯಶ್ರೀಯವರನ್ನು 'ಆಳ್ವಾಸ್ ನುಡಿಸಿರಿ-೨೦೧೪'ನ್ನು ಕೊಟ್ಟು ಸನ್ಮಾನಿಸಲಾಯಿತು.

